IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಜನಪದರ ಗ್ರಹಿಕೆಯಲ್ಲಿ ಭಾವೈಕ್ಯತೆ

**ಡಾ.ಮುಮ್ತಾಜ್‌ಬೇಗಂ ಗಂಗಾವತಿ**

ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ

ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗಂಗಾವತಿ.

ಜಿಲ್ಲಾ ಕೊಪ್ಪಳ. ಮೊ:೯೮೬೬೬೬೦೭೫

ಜನಪದರ ಬದುಕಿನ ರೀತಿ ನೀತಿಗಳು ಇರುವುದು ಭಾವೈಕ್ಯತೆಯ ನೆಲೆಯಲ್ಲಿ. ತನ್ನ ಸುತ್ತಮುತ್ತಲಿನ ಪರಿಸರವನ್ನು ಸಹೋದರತೆಯಿಂದ ಕಾಣುತ್ತಾ ಜೀವನ ಸಾಗಿಸುವುದೇ ಭಾವೈಕ್ಯತೆಯ ಸಂಕೇತವಾಗಿದೆ. ಅದು ಸಂಪ್ರದಾಯ, ರೂಢಿ, ಪದ್ಧತಿ, ಆಚರಣೆ, ಸಾಹಿತ್ಯದ ಹಿನ್ನಲೆಯಲ್ಲಿ ಅಭಿವ್ಯಕ್ತಗೊಳ್ಳುತ್ತಾ ಹೋಗುತ್ತದೆ. ಭಾರತೀಯ ಸಂಸ್ಕೃತಿ ಶ್ರೇಷ್ಠ ಸಂಸ್ಕೃತಿ ಎನಿಸಿಕೊಳ್ಳುವುದೇ ಭಾವೈಕ್ಯತೆಯ ದೃಷ್ಟಿಯಿಂದ. ಅನೇಕ ಧರ್ಮಗಳು, ಜಾತಿಗಳು, ಜನಾಂಗಗಳು, ಸಮುದಾಯಗಳು ಇರುವ ಈ ನೆಲದಲ್ಲಿ ಎಲ್ಲರೊಟ್ಟಿಗೆ ಬದುಕು ಕಟ್ಟಿಕೊಳ್ಳುವ ಬಗೆಯಲ್ಲಿ ಭಾವೈಕ್ಯತೆಯ ಸಂಕೇತಗಳನ್ನು ಕಾಣುತ್ತೇವೆ.

ಭಾವೈಕ್ಯತೆ ಮಾನವ ಕುಲವನ್ನು ಒಂದಾಗಿಸುವ ತತ್ವವನ್ನು ಒಳಗೊಂಡಿದೆ. ಮನುಷ್ಯ ಮನುಷ್ಯರ ಮಧ್ಯೆ ಜಾತಿಬೇಧವಿಲ್ಲದೆ ಒಬ್ಬರಿಗೊಬ್ಬರು ಪ್ರೀತಿಯಿಂದ ಬದುಕಬೇಕು ಎನ್ನುವ ಅರ್ಥವನ್ನು ಹೊಂದಿದೆ. ಮೇಲು-ಕೀಳು ತಾರತಮ್ಯ ಮನೋಭಾವವನ್ನು ಹೊರದೂಡಿ ಸಹೋದರತ್ವ ಭಾವನೆ ಮೂಡಿಸುವುದೇ ಮುಖ್ಯ ಉದ್ಧೇಶವಾಗಿದೆ. ವರ್ಣ-ವರ್ಗ ವ್ಯವಸ್ಥೆಯ ನಡುವೆಯೂ ಜನಪದರು ಭಾವೈಕ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಜನಪದರ ಸಹಕಾರ ಮತ್ತು ಸೌಹಾರ್ದತೆಯ ಅಂಶಗಳೇ ಇಂದಿಗೂ ಭಾವೈಕ್ಯತೆಯ ಮೌಲ್ಯ ಜನಪದರ ಮಧ್ಯೆ ಇರಲು ಸಾಧ್ಯವಾಗಿದೆ.  ಈ ನೆಲದಲ್ಲಿ ಜನಪದರು ಪ್ರೀತಿ, ವಿಶ್ವಾಸ, ಸೌಹಾರ್ದತೆಯಿಂದಲೇ ಬದುಕಿ ಬಂದಿದ್ದಾರೆ. ಆದರೆ ಆಧುನಿಕತೆಯ ಪ್ರಭಾವ ಗ್ರಾಮ್ಯಭಾಗದ ಜನಜೀವನದ ಮೇಲೆ ಪರಿಣಾಮ ಬೀರಿರುವುದನ್ನು ಕಾಣುತ್ತೇವೆ. ಆದರೆ ಹಿಂದೆ ಸೌಹಾರ್ದತೆ, ಮಾನವೀಯತೆ, ಭಾವೈಕ್ಯತೆಯ ಮೌಲ್ಯಗಳ ಹಿನ್ನಲೆಯಲ್ಲಿ ಜನಪದರು ಬದುಕನ್ನು ಸಾಗಿಸುತ್ತಿದ್ದರು.

ಊರಿನ ಮಾನ ಮರ್ಯಾದೆ  ಪ್ರಶ್ನೆ ಬಂದಾಗಲೆಲ್ಲಾ ಜಾತಿ, ಧರ್ಮವೆನ್ನದೇ ಎಲ್ಲರೂ ಒಗ್ಗೂಡಿ ಬಂದ ಸಂಕಷ್ಟವನ್ನು ಎದುರಿಸುತ್ತಿದ್ದರು. ಊರಿನಲ್ಲಿ ಹುಟ್ಟಿದ ಶುಭ ಸಂದರ್ಭದಿಂದ ಹಿಡಿದು ಸಾವಿನ ಸೂತಕದ ತನಕ ಎಲ್ಲರಿಗೂ ಎಲ್ಲರೂ ಬೇಕು. ಮದುವೆಯಂತ ಶುಭ ಸಂದರ್ಭದಲ್ಲಂತೂ ಎಲ್ಲರೂ ಇರಲೇ ಬೇಕಿತ್ತು. ಮದುವೆ ಆಹ್ವಾನ ಪತ್ರಿಕೆಯಲ್ಲಿ 'ಸಹಕುಟುಂಬ ಪರಿವಾರ ಸಮೇತ ಆಗಮಿಸಬೇಕು ಎಂಬ ಸಾಲುಗಳಿರುತ್ತವೆ. ಇದರ ಅರ್ಥ ಎಲ್ಲರೂ ಎಲ್ಲಾ ಕಾರ್ಯದಲ್ಲಿರಬೇಕೆಂದು ಬಯಸುವುದು. ಅಲ್ಲದೇ ಹೆಣ್ಣಿನ ಮದುವೆ ಸಮೀಪಿಸುತ್ತಿದ್ದಂತೆ ಮತ್ತು  ಸಾಮಾನ್ಯವಾಗಿ ಹುಡುಗಿಯ ನಿಶ್ಚಿತಾರ್ಥ ಆಗಿದೆ ಎಂದರೆ ಸಾಕು  'ಯಾವ ಊರಿಗೆ' ಕೊಟ್ಟಿದ್ದಿರಿ ಎಂದು ಕೇಳುತ್ತಾರೆ. ಅಂದರೆ ಊರಲ್ಲಿ ಸೌಹಾರ್ದತೆ, ಸಹಬಾಳ್ವೆ ಇದ್ದರೆ ಮಗಳು ಸುಖವಾಗಿ ಇರಲು ಸಾಧ್ಯ ಎನ್ನುವ ವ್ಯಷ್ಠಿಪ್ರಜ್ಞೆಯ ನೆಲೆಯಲ್ಲಿ ಸಮಷ್ಠಿ ಸಂತಸವನ್ನು ಕಾಣುವುದು ಮುಖ್ಯ ಸಂಗತಿಯಾಗಿದೆ.

ಈ ನೆಲದಲ್ಲಿ ಸಂತರಿಂದ ಹಿಡಿದು ಸೂಫಿಗಳವರೆಗೆ ಭಾವೈಕ್ಯತೆಯ ಸಾರವನ್ನು ಸಾರಿದ್ದಾರೆ. ಆದ್ದರಿಂದ ಜನಪದರು ಅದಕ್ಕೂ ಮುನ್ನವೇ ಈ ಬಗೆಯ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟಿಕೊಟ್ಟವರಲ್ಲಿ ಮೊದಲಿಗರು. ಗ್ರಾಮ್ಯ ಭಾಗಗಳಲ್ಲಿ ಹಲವಾರು ಜನಸಮುದಾಯಗಳು ವಾಸಿಸುತ್ತವೆ. ಅಲ್ಲಿ ಅವರ ನಡೆನುಡಿಗಳು ಅಕ್ಕ, ಅವ್ವ, ಮಾವ, ಅತ್ತೆ, ಅಣ್ಣ, ತಮ್ಮ ಹೀಗೆ ಸಂಬಂಧಿವಾಚಿ ಪದಗಳನ್ನು ಬಳಸುವುದರ ಮೂಲಕ ಸೌಹಾರ್ದತೆಯನ್ನು ಬೆಳೆಸಿಕೊಂಡುಬಂದಿದ್ದಾರೆ. ಒಬ್ಬರಿಗೊಬ್ಬರು ಕಷ್ಟ ಸುಖಗಳಲ್ಲಿ ಭಾಗಿಯಾಗಿ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತಿದ್ದರು.

**ಜನಪದ ಆಚರಣೆ ಮತ್ತು ಭಾವೈಕ್ಯತೆ**

ಗ್ರಾಮ್ಯ ಭಾಗದಲ್ಲಿ ಗ್ರಾಮದೇವತೆಗಳ ಜಾತ್ರೆ ಸಂದರ್ಭದಲ್ಲಂತೂ ಊರಿನಲ್ಲಿರುವ ಸಂಭ್ರಮಕ್ಕೆ ಮಿತಿಯೆ ಇರುವುದಿಲ್ಲ. ಗಂಡನ ಮನೆಗೆ ಹೋದ ಹೆಣ್ಣುಮಕ್ಕಳನ್ನು ಊರ ಜಾತ್ರೆಯ ಸಂದರ್ಭಕ್ಕೆ ತವರಿಗೆ ಕರೆತರುತ್ತಾರೆ. ಊರವರ ದವಸ-ಧಾನ್ಯಗಳನ್ನು ಸೇರಿಸಿ ಒಂದು ದಿನ ಗ್ರಾಮದೇವರ ಜಾತ್ರೆ ಏರ್ಪಡಿಸಿ ಊರಿನ ಎಲ್ಲ ಕೋಮಿನ ಜನ ಒಂದುಗೂಡಿ ಜಾತ್ರೆ ನಡೆಸುತ್ತಾರೆ, ಎಲ್ಲರ ಶ್ರಮದ ಪ್ರತೀಕದ ರೂಪವಾಗಿ ಪ್ರಸಾದವನ್ನು ಸ್ವೀಕರಿಸುತ್ತಾರೆ. ಊರವರೆಲ್ಲ ಸೇರಿ ಊರಿನ ಸೀಮೆಯಲ್ಲಿರುವ ದೇವರ ಗುಡಿಗೆ ಬಂದು ಎಲ್ಲರ ಮನೆಯಿಂದ ಕೂಡಿಸಿದ ಅನ್ನವನ್ನು ಊಟ ಮಾಡಿ ಸಂತಸ ಸಂಭ್ರಮದಿಂದ ಊರಿಗೆ ಹಿಂತಿರುಗುತ್ತಾರೆ. ಶ್ರಮ ಜೀವಿಗಳಾದ ಈ ವರ್ಗದ ಜನ ತಮ್ಮ ಶ್ರಮಭರಿತ ದುಡಿಮೆಯ ಮಧ್ಯದಲ್ಲಿ ಶ್ರಮ ನಿವಾರಣೆಗಾಗಿ ರಚಿಸಿಕೊಂಡು ಬಂದ ಸಾಹಿತ್ಯ ಸೃಷ್ಟಿ ಅಪಾರವಾಗಿದೆ.

ಗ್ರಾಮ್ಯಭಾಗದಲ್ಲಿ ಸೌಹಾರ್ದತೆಯಿಂದ ಹಿಂದೂ ಮುಸ್ಲಿಂರೆಂಬ ಬೇಧವಿಲ್ಲದೆ ಸಹೋದರತೆಯಿಂದ ಬಾಳುತ್ತಿದ್ದರು. ರಾಮ-ರಹೀಮ, ಈಶ್ವರ-ಅಲ್ಲಾ ಬೇರೆ ಬೇರೆ ಅಲ್ಲವೆಂಬ ಭಾವನೆಯಿಂದಲೇ ಬದುಕನ್ನು ಸಾಗಿಸುತ್ತಿದ್ದರು. ಮೊಹರಂ ಆಚರಣೆಯ ಸಂಪ್ರದಾಯದಲ್ಲಿ ಈ ಸೌಹಾರ್ದತೆಯನ್ನು ಕಾಣುತ್ತೇವೆ. ಜಾತಿ, ಧರ್ಮ ಬೇಧಗಳಿಲ್ಲದೇ ಒಂದಾಗಿ ಉತ್ಸಾಹದಿಂದ ಅಲಾವಿ ನೃತ್ಯ, ಕೋಲಾಟ ಹಾಕುತ್ತಾ ಹಾಡಿ ಕುಣಿದು ನಲಿಯುತ್ತಾರೆ. ಮೊಹರಂ ಆಚರಣೆಯ ಸಂದರ್ಭದಲ್ಲಿ ಇದು ಮುಸಲ್ಮಾನರ ಹಬ್ಬ ಎನ್ನುವ ಬೇಧವಿಲ್ಲದೇ ಪಂಜಾ ಹಿಡಿದ ವ್ಯಕ್ತಿ ಮುಸ್ಲಿಂನಾದರೆ ಆತನ ಟೊಂಕ ಹಿಡಿಯುವ ವ್ಯಕ್ತಿ ಹಿಂದು ಆಗಿರುತ್ತಾನೆ. ಇದು ಅವರಿಬ್ಬರ ನಡುವೆ ಎದ್ದು ಕಾಣುವ ಸೌಹಾರ್ದತೆಯ ಸಂಕೇತವಾಗಿದೆ. "ಕೆಲವು ಹಳ್ಳಿಗಳಲ್ಲಿ ಮುಸ್ಲಿಮರು ಇಲ್ಲವಾದರೂ ಈ ಆಚರಣೆಯನ್ನು ಹಿಂದೂಗಳು ಚಾಚೂ ತಪ್ಪದೆ ಆಚರಿಸಿಕೊಂಡು ಬರುತ್ತಿರುವ ನಿದರ್ಶನಗಳುಂಟು. ಪೀರಗಳಿಗೆ ದಿನವಿಡಿ ನೈವೇದ್ಯ ಸಮರ್ಪಣೆ ನಡೆಯುತ್ತದೆ. ಮನೆ ಮನೆಗೆ ಪಂಜಾಗಳ ಮೆರವಣಿಗೆ ಬಂದಾಗ ನೀರು ನೀಡಿ ತಮ್ಮ ಮನೆಗೆ ಬರಮಾಡಿಕೊಳ್ಳುತ್ತಾರೆ. ಆ ಪೀರಗಳಲ್ಲಿ ಹರಕೆ ಹೊರುತ್ತಾರೆ. ಈಡೇರಿದರೆ ಅವುಗಳಿಗೆ ಛತ್ರಿ-ಚಾಮರ, ದೀಪಗಳನ್ನು ಕಾಣಿಕೆಯಾಗಿ ನೀಡುತ್ತಾರೆ. ರಂಜಾನ್ ಹಬ್ಬದಂದು ಹಿಂದೂಗಳನ್ನು ಮನೆಗೆ ಕರೆದು ಇಲ್ಲವೇ ಅವರ ಮನೆಗಳಿಗೆ ಸುಕುಂಭ ಕೊಡುವ ಪರಂಪರೆ ಈಗಲೂ ಬಳಕೆಯಲ್ಲಿದ್ದು ಇದು ಹಿಂದೂ ಮುಸ್ಲಿಂರ ನಡುವಿನ ಬಾಂಧವ್ಯಗಳನ್ನು ಹೆಚ್ಚಿಸಿವೆ."೧ ಹೀಗೆ ಹಿಂದೂ ಮುಸ್ಲಿಂ ಎನ್ನುವ ಧರ್ಮ ಬೇಧವಿಲ್ಲದೇ ಆಚರಿಸುವ ಕಾರಣದಿಂದ ಭಾವೈಕ್ಯತೆಯನ್ನು ಪ್ರತಿಪಾದಿಸುತ್ತದೆ.

ಭಾವೈಕ್ಯತೆಯ ವಿಷಯಕ್ಕೆ ಸಂಬಂಧಿಸಿದಂತೆ ಜನಪದ ಸಾಹಿತ್ಯದಲ್ಲಿ ಅನೇಕ ಅಂಶಗಳು ಕಾಣಸಿಗುತ್ತವೆ. ಅದರಲ್ಲೂ ಮುಖ್ಯವಾಗಿ ಹಿಂದೂ ಮುಸ್ಲಿಂ ಬಾಂಧವ್ಯದ ಕೊಂಡಿಯಂತಿರುವ ಮೊಹರಂ ಪದಗಳನ್ನು ಹಾಡುವ ಪದ್ಧತಿ ರೂಢಿ ಇದೆ. ಆಚರಣೆಯ ಹಿನ್ನಲೆಯಲ್ಲೂ ಮೊಹರಂ ಹಬ್ಬವನ್ನು ಹಿಂದೂ ಮುಸ್ಲಿಂ ಎನ್ನುವ ಬೇಧವಿಲ್ಲದೆ ಹಬ್ಬವನ್ನು ಆಚರಿಸುವ ಪದ್ಧತಿ ಇದೆ.

ಭಾರತದಲ್ಲಿ ಅನೇಕ ಹಬ್ಬಗಳಂತೆ ಮೊಹರಂ ಹಬ್ಬವನ್ನು ವಿಶಿಷ್ಟರೀತಿಯಲ್ಲಿ ಆಚರಿಸಲಾಗುತ್ತದೆ. ಮೊಹರಂ ಹಬ್ಬದ ಮೇಲೆ ಹಿಂದೂ ಸಂಸ್ಕೃತಿಯ ಪ್ರಭಾವವಾಗಿದೆ. ಪ್ರಾದೇಶಿಕವಾಗಿ ರೂಢಿಯಲ್ಲಿರುವ ಮೊಹರಂ ಆಚರಣೆಯನ್ನು ಅವಲೋಕಿಸಿದಾಗ ಹಿಂದೂ ಮುಸ್ಲಿಂ ಭಾವೈಕ್ಯತೆಯ ಕುರುಹುಗಳು ಕಂಡುಬರುತ್ತವೆ ಎಂದು ಡಾ. ದಸ್ತಗಿರ ಅಲ್ಲೀಭಾಯಿಯವರು ಮೊಹರಂ ಆಚರಣೆಯ ಬಗ್ಗೆ ಸಂಶೋಧಿಸುವದರೊಂದಿಗೆ ಈ ಮಾಹಿತಿಯನ್ನು ನೀಡುತ್ತಾರೆ.

"ಉತ್ತರ ಪ್ರದೇಶದ ಲಖನೌ ಷಿಯಾ-ಸುನ್ನಿ ಮುಸ್ಲಿಮರ ಜೊತೆಗೆ ಹಿಂದುಗಳು ಸೇರಿ ತಾಜಿಯಾ ಕಟ್ಟುತ್ತಾರೆ. ಇಮಾಮಬಾಡಾದಲ್ಲಿ ಬರಿಗಾಲಿನಿಂದ ಬೆಂಕಿಯ ಮೇಲೆ ನಡೆದು ಹೋಗುವ ದೃಶ್ಯವನ್ನು ಕಾಣುತ್ತೇವೆ. ಹಿಂದೂ ಸಂಸ್ಕೃತಿಯಿಂದ ಪ್ರಭಾವಗೊಂಡ ಅಂಶಗಳು, ಚನೋರಬಾ ಗ್ರಾಮದಲ್ಲಿ ಮೊಹರಂ ಮೆರವಣಿಗೆಗೆ ಹೊರಟಾಗ ಹಿಂದೂ ಮುಸ್ಲಿಮರು ರೋಗ ಪೀಡಿತ, ಜೀವನದಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿರುವವರನ್ನು ತಾಜಿಯಾಗಳ ಕೆಳಗೆ ಹಾಯಿಸುತ್ತಾರೆ. ಈ ಪದ್ಧತಿ ಹಿಂದುಗಳ ರಥೋತ್ಸವವನ್ನು ನೆನಪಿಸುತ್ತದೆ. ಹೈದ್ರಾಬಾದ್ ಮತ್ತು ಗೋಲ್ಕೊಂಡ ನಗರಗಳ ಮೊಹರಂ ಆಚರಣೆಯಲ್ಲಿ ಹಿಂದುಗಳು ಪಾಲ್ಗೊಂಡು ಎಡೆ, ಉಡಿ ಕಾಣಿಕೆ ನೀಡುತ್ತಾರೆ. ಪಶ್ಚಿಮ ಬಂಗಾಳದ ವಿಷ್ಣುಪುರ ನಗರದ ಮೊಹರಂ ಜುಲೂಸದಲ್ಲಿ ಧುಲ್ ಧುಲ್ ಎಂಬ ಮಣ್ಣಿನ ಕುದುರೆಯನ್ನು ತಯಾರಿಸುತ್ತಾರೆ ಇದರಲ್ಲಿ ಹಿಂದು ದೇವ ದೇವತೆಗಳ ಮಣ್ಣಿನ ಮಾದರಿಯ ಛಾಯೆಯನ್ನು ಹೊಂದಿರುತ್ತವೆ. ಅಲ್ಲದೇ ಮಹಾರಾಷ್ಟ್ರದ ಅಕ್ಕಲಕೋಟೆ ನಗರದಲ್ಲಿ ಹಿಂದು ಮುಸ್ಲಿಂರು ಸೇರಿ ತಾಜಿಯಾ ತಯಾರಿಸುತ್ತಾರೆ. ಹಿಂದು ಮುಸ್ಲಿಮರು ತಾಜಿಯಾಗಳಿಗೆ ತೆಂಗಿನ ಕಾಯಿಯನ್ನು ಒಡೆಯುತ್ತಾರೆ, ಅಲ್ಲದೇ ತಾಜಿಯಾಗಳಿಗೆ ವೀಳ್ಯದೆಲೆಯ ಹಾರ ಹಾಕುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ರಾಯಚೂರು ಜಿಲ್ಲೆಯ ಮುದಗಲ್ಲ ಗ್ರಾಮದಲ್ಲಿ ಮೊಹರಂ ಆಚರಣೆಯಲ್ಲಿ ಮುಸ್ಲೀಮೇತರರೇ ಹೆಚ್ಚಾಗಿ ಭಾಗವಹಿಸುತ್ತಾರೆ. ಹರಕೆ ತೀರಿಸುವುದು, ಹುಲಿವೇಷ ಹಾಕುವುದು, ಧೀರ್ಘ ದಂಡ ನಮಸ್ಕಾರ ಹಾಕುವರು, ಅಳ್ಳಳ್ಳಿ ಬವ್ವಾ ವೇಷ ಹಾಕಿ ಕುಣಿದು ಕುಪ್ಪಳಸುವರು. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕೂಡಿಸುವ ಮೌಲಾಲಿ ಆಲಮ್‌ಗಳಿಗೆ ಹಿಂದೂ ಮುಸ್ಲಿಮರು ರಾಮುಲಸ್ವಾಮಿ ಎಂದೇ ಕರೆಯುತ್ತಾರೆ. ಕೋಲಾರ ಜಿಲ್ಲೆಯ ನಾಗಸಂದ್ರದ ಮೊಹರಂ ಬಾಬಯ್ಯನ ಹಬ್ಬವೆಂದೇ ಪ್ರಸಿದ್ಧಿಯನ್ನು ಪಡೆದಿದೆ. ಗದಗ ಜಿಲ್ಲೆಯ ಯಕ್ಲಾಸಪೂರ ಗ್ರಾಮದ ಮೊಹರಂ ಹಬ್ಬವನ್ನು ಜಾತ್ರೆಯ ಬಗೆಯಲ್ಲಿ ಆಚರಿಸುತ್ತಾರೆ. ಮಳೆ-ಬೆಳೆ ಕುರಿತು ಹೇಳಿಕೆ-ಕೇಳಿಕೆ ಮಾಡುತ್ತಾರೆ. ಗ್ರಾಮದೇವತೆಯ ಭೇಟಿಗೆ ಡೋಲಿ ಮತ್ತು ಕೈ ಹೋಗುವ ಆಚರಣೆ ಕಂಡುಬರುತ್ತದೆ. ಧಾರವಾಡ ಜಿಲ್ಲೆಯ ಯರಗುಪ್ಪಿ ಗ್ರಾಮದ ಮೊಹರಂನ ವಿಶೇಷವೆಂದರೆ ಬ್ರಾಹ್ಮಣರು ತಮ್ಮ ಶಕ್ತ್ಯಾನುಸಾರ ದೇವರ ಚಾಕರಿ ಮಾಡುತ್ತಾರೆ.

ಉತ್ತರ ಕರ್ನಾಟಕದ ಬಹುತೇಕ ಗ್ರಾಮದಲ್ಲಿ ನಾಗರಪಂಚಮಿಯನ್ನು ಆಚರಿಸುತ್ತಾರೆ. ಅದರಲ್ಲಿ ಗ್ರಾಮದ ಎಲ್ಲಾ ಸಮುದಾಯದವರು ಸೇರಿ ಆಚರಿಸುತ್ತಾರೆ. ಹಿಂದೂ ಮುಸ್ಲಿಂ ಬೇಧವಿಲ್ಲದೆ ನಾಗಪ್ಪನಿಗೆ ಹಾಲನ್ನೆರೆದು ಟೆಂಗಿನಕಾಯಿಯನ್ನು ಒಡೆಸುತ್ತಾರೆ. ಗೌರಿಹುಣ್ಣಿಮೆಯಲ್ಲಿ ಗೌರಿಪೂಜೆಯನ್ನು ಮಾಡುತ್ತಾರೆ. ಅನೇಕ ಮುಸಲ್ಮಾನ ಕುಟುಂಬದವರು ಗೌರಿಗೆ ಆರತಿಯನ್ನು ತಂದು ಬೆಳಗುವ ಆಚರಣೆ ಕಾಣುತ್ತೇವೆ.

ಮುಸಲ್ಮಾನ ಸಂತರ ದರ್ಗಾಗಳು, ಹಿಂದೂಗಳ ದೇವಸ್ಥಾನಗಳ ಸ್ಥಳಗಳು ಭಾವೈಕ್ಯತೆಯ ಕೇಂದ್ರಗಳಾಗಿದ್ದವು. ರಾಣೋಜ ಪೀರ, ಕಲಬುರ್ಗಿ ಸಿದ್ಧಬಾಶಾ, ಯಮನೂರ ಪೀರ್, ಝುಟ್ ಪಟ್ ಬೀಬೀ, ಭೈರಾಮರಡಿಗಿ ಮಲ್ಲಿಕ್‌ಸಾಬ, ಭಟ್ಟರಕಿ ಬಾವಾಸಾಬ, ನೀಲೂರ ದಸ್ತಗೀರ್, ಆಳಂದ ಲಾಡ್ಲೆಸಾಬ, ಹೀರೇ ಜೇವರ್ಗಿ ರಾಜಾ ಬಕ್ಸರ್, ಗೋರವಾಸಿ ಇಸ್ಮಾಯಿಲ್ ಖಾದ್ರಿ, ತಾವರಗೇರಿಯ ಶಾಮೀದ್ ಅಲಿ, ಗಂಗಾವತಿಯ ಕರ್ನೂಲ್ ತಾತಾನ ದರ್ಗಾ ಮುಂತಾದ ಸಾಧು ಸಂತ ಸೂಫಿಗಳನ್ನು ಭಯ ಭಕ್ತಿಯಿಂದ ಆರಾಧಿಸುತ್ತಾರೆ. ಕೆಲವು ದರ್ಗಾಗಳಿಗೆ ಹಿಂದೂಗಳ ಮನೆಯಿಂದಲೇ ನೈವೇದ್ಯ ಬರುತ್ತದೆ. ಹೀಗೆ ನಂಬಿಕೆ ವಿಶ್ವಾಸಕ್ಕೆ ಮಾರು ಹೋಗಿ ಶರಣ, ಸೂಫಿ, ಸಂತ, ಸನ್ಯಾಸಿ, ಪೀರ, ಬಾವಾಗಳಲ್ಲಿ ಜನಪದರು ಭಕ್ತಿ ನಿಷ್ಠೆ ಬೆಳೆಸಿಕೊಂಡು ಬಂದಿದ್ದಾರೆ. ಇಲ್ಲಿನ ಶರಣರ–ಸಂತ–ಸೂಫಿಗಳ ಕುರಿತಂತೆ ಜನಪದ ಹಾಡುಗಳನ್ನು ಕಟ್ಟಿ ಹಾಡಿದ್ದಾರೆ.

## ಜನಪದ ಸಾಹಿತ್ಯ ಮತ್ತು ಭಾವೈಕ್ಯತೆ

ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಮೊಹರಂ ಪದಗಳನ್ನು ಹಾಡಲಾಗುತ್ತದೆ. ಅವುಗಳನ್ನು ಕರ್ಬಲಾ ಪದಗಳು, ರಿವಾಯಿತ ಪದ, ಜಂಗಿನ ಪದಗಳು, ಅಲಾವಿ ಪದಗಳು ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. "ಸುಮಾರು ಹದಿಮೂರು ನೂರು ವರ್ಷಗಳ ಹಿಂದೆ ಇಮಾಮ ಹುಸೇನರು ಧರ್ಮ ರಕ್ಷಣೆಗಾಗಿ, ಸತ್ಯಕ್ಕಾಗಿ ಅರಬಸ್ತಾನದ ಕರ್ಬಲಾ ಮರುಭೂಮಿಯಲ್ಲಿ ಪ್ರಾಣ ನೀಡಿದ ಕಥೆಯನ್ನು ಈ ಹಾಡು ತಿಳಿಸುತ್ತದೆ. ಅಂದು ಅವರು ಕರ್ಬಲಾ ಕಾಳಗದಲ್ಲಿ ಸತ್ಯವನ್ನು ಎತ್ತಿ ಹಿಡಿಯಲು ಸುರಿಸಿದ ರಕ್ತ, ಶಾಂತಿಪ್ರಿಯರಿಗೆ, ಧರ್ಮ ರಕ್ಷಕರಿಗೆ, ನ್ಯಾಯಪರರಿಗೆ ಸ್ಫೂರ್ತಿಯ ಸೆಲೆಯಾಗಿದೆ. ಸತ್ಯ, ಧರ್ಮ, ನ್ಯಾಯಗಳ ಉಳಿವಿಗಾಗಿ ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ಐತಿಹಾಸಿಕ ಸತ್ಯವನ್ನು, ಒಮ್ಮೆ ಅಭಿಮಾನದಿಂದ ಮತ್ತೊಮ್ಮೆ ಭಾರವಾದ ಹೃದಯದಿಂದ ನಮ್ಮ ಜನಪದ ಕವಿಗಳು ಹಾಡಿದ ಹಾಡುಗಳೇ ಮೊಹರಂ ಪದಗಳು."೨ ಹೀಗಾಗಿ ಜನಪದರು ಧರ್ಮ, ನ್ಯಾಯ, ಸತ್ಯದ ಪರವಾಗಿರುವುದರಿಂದ ಇಂಥ ಭಾವೈಕ್ಯೆತೆಯ ಸಂಕೇತಗಳಾದ ಹಾಡುಗಳು ಇಂದಿಗೂ ಪ್ರಚಲಿತದಲ್ಲಿವೆ.

ಮೊಹರಂ ಪದಗಳನ್ನು ಮೊಹರಂ ಆಚರಣೆಯ ಸಂದರ್ಭದಲ್ಲಿ ಮಾತ್ರ ಹಾಡಲಾಗುತ್ತದೆ. ಸತ್ಯ ಧರ್ಮಗಳ ಉಳಿವಿಗಾಗಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ಲೌಕಿಕದಲ್ಲಿ ಸೋತಂತೆ ಕಂಡರೂ ವಿಶ್ವಕ್ಕೆ ಸತ್ಯದ ನಿತ್ಯತ್ವವನ್ನು ಮನಗಾಣಿಸಿಕೊಟ್ಟು ವೀರ ಮರಣವನ್ನಪ್ಪಿದ (ಹ.ಇ.)ಹುಸೇನನರಂತವರು ಇತಿಹಾಸದಲ್ಲಿ ತೀರ ವಿರಳವಾಗಿ ದೊರೆಯುವರು. ಇದನ್ನೆ ಜನಪದ ಕವಿಗಳು ಈ ರೀತಿಯಲ್ಲಿ ಪದಗಳನ್ನು ಕಟ್ಟಿ ಹಾಡಿದ್ದಾರೆ.

"ಧರ್ಮಕ ಸತ್ತವರು ಸಿಗತಾರ ಕೋಟಿಗೊಬ್ಬ ಜನರಾ

ಮುಸಲ್ಮಾನ ಮಂದ್ಯಾಗ ದೊರೀತಾರ ಹುಸೇನ ಸಾಹೇಬರಾ

ಎಂಬ ಮಾತಿನಲ್ಲಿ ತಿಳಿಸಿದ್ದಾನೆ. ಅಲ್ಲದೇ ಅಬ್ಬಾಸ ಅಲಿಯವರ ಮೇಲೆ ವೈರಿ ಸೈನಿಕರು ದಾಳಿ ಮಾಡಿದರು. ನಾಲ್ಕು ನಿಟ್ಟಿನಿಂದ ಮೋಸದಿಂದ ಮುತ್ತಿದ್ದ ವೈರಿ ಸೈನಿಕರನ್ನು ಎದುರಿಸುತ್ತ ರುಂಡ ಚಂಡಾಡುತ್ತ ಕೊನೆಗೆ ಹುತಾತ್ಮರಾದರು. ಇದನ್ನು ಜನಪದ ಕವಿಗಳು ಹೀಗೆ ವರ್ಣಿಸುತ್ತಾರೆ.

ಸೂರಾ–ಧೀರಾ ತಗೊಂಡು ಹತಿಯಾರಾ

ಕೈಯಾಗ ಹಿಡಿದಾ ಅಂತಾನೋ ಬರ್‍ರೆಂದಾ

ಅಬ್ಬಾಸಲಿ ಶರಣರ ಜಂಗ ನಡೆದೀತೋ ಆವಾಗ

ಇಷ್ಟಿದಿಲ್ಲೊ ಜೀವದ ಹಂಗ/ ನಬಿಸಾಬರ ಕರುಣ ನಮಗ

ಐತಿ ನಮ್ಮಮ್ಯಾಲಿ/ ಅಂತಾರೋ ಅಬ್ಬಾಸಲಿ/

ಶಿವನ ಮನಿ ಹುಲಿ/ಲಡದಾ–ಹೊಡೆದಾ–ನಡೆದಾ..೩ ಈ ಬಗೆಯ ರಿವಾಯಿತಿ ಪದಗಳಲ್ಲಿ ಕರ್ಬಲಾ ಕಾಳಗವನ್ನು ವರ್ಣಿಸುವಾಗಲೂ ಸ್ಥಳೀಯ ಸಂಸ್ಕೃತಿಯ ಪ್ರಭಾವವನ್ನು ಆಗಿರುವುದನ್ನು ತಳ್ಳಿಹಾಕುವಂತಿಲ್ಲ ಎನ್ನುವುದಕ್ಕೆ 'ಶಿವನ ಮನಿ ಹುಲಿ' ಎನ್ನುವ ಧ್ವನಿಪೂರ್ಣವಾದ ಮಾತು ಸಾಕ್ಷಿಯಾಗಿದೆ.

"ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ವೀರಶೈವ ಧರ್ಮವೂ ಒಂದು. ವೀರಶೈವ ಧರ್ಮದ ಪ್ರಭಾವ ಮತ್ತು ವೀರಶೈವ ಸಾಹಿತ್ಯದ ಪ್ರಭಾವ ಮೊಹರಂ ಪದಗಳ ಮೇಲೆ ಸಾಕಷ್ಟು ಆಗಿದೆ. ಇಸ್ಲಾಮೇತರ ಧರ್ಮಕ್ಕೆ ಸಂಬಂಧಿಸಿದ ಸವಾಲು–ಜವಾಬು ಪದಗಳಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಒಂದು ಸವಾಲು ಪದ ಹೀಗಿದೆ

'ಆರು ಸ್ಥಲ ಆರು ಚಕ್ರ ಪ್ರಮಾಣ ಆರುಲಿಂಗ

ಇದರರ್ಥ ಮಾಡೋ ನಿನಾ

ಸಭಾದೊಳು ನಿಂತು ಸರ್ವ ಸಭಾಕ ತಿಳುವ ಹಾಂಗ

ಆರು ಸ್ಥಲದ ಮರಣದೊಳು ಮೂಲಸ್ಥಾನ ಯಾವುದು ಹೇಳು

ಯಾವ ಸ್ಥಲಕ ಯಾವ ಚಕ್ರ ಯಾವ ಪ್ರಮಾಣ ಯಾವ ಲಿಂಗ

ಸಭಾದೊಳು ಬಂದು ಇಟ್ಟೇವಿ ಬಡಿವಾರ ಶೋಧನಾ ಮಾಡೋ ನೀನಾ'

ಸವಾಲು ವೀರಶೈವ ತತ್ತ್ವಕ್ಕೆ ಸಂಬಂಧಿಸಿದ್ದಾದರೂ ರಿವಾಯಿತ ಪದಗಳ ಹೊತ್ತಿಗೆಯಲ್ಲಿ ದೊರೆತಿರುವುದು ಒಂದು ವೈಶಿಷ್ಟ್ಯ. ಹೀಗೆ ಮೊಹರಂ ಪದಗಳು ಹಿಂದೂ ಮುಸ್ಲಿಂ ಮೈತ್ರಿಯ ಸಂಕೇತವನ್ನು ಸಾರುತ್ತವೆ. ಭಾವೈಕ್ಯದ ಬೆಸುಗೆಯನ್ನು ಗಟ್ಟಿಗೊಳಿಸಲು ಪ್ರಮುಖ ಪಾತ್ರವಹಿಸುತ್ತವೆ."೪ ಮೊಹರಂ ಆಚರಣೆ ಭಾವೈಕ್ಯತೆಯ ಸಂಕೇತವಾಗಿದೆ.

ಲಾಡ ಬಂಧುರ ರುಕುಮತೋಲ ಬಾವಾ ಅಲಾ ಅಂಗಿತೋಳನಾಗೆ

ತೋರಸ್ಯಾನು ಎಲ್ಲಾನು ಮಾಡಿ ಸಿದ್ಧಾಂತಾ

ಬ್ರಾಹ್ಮಣ ಮುಸಲ್ಮಾನ ಇಬ್ಬರದು ಗೆಳತಾನ ಕೂಡಿ ನಡದಾದ

ಭಾಳ ದಿನ ಒಳಳೆ ತರಬೇತ/

ನಂಬಿಗಿ ಇಟ್ಟು ಬೇಡಿಕೋರಿ ಕೊಡತಾರ ಸರ್ವಸಂಪತ್ತ/

ಇಂಥ ರಚನೆಗಳು ಆಯಾ ಪ್ರದೇಶಕ್ಕೆ ಸಿಮೀತವಾದರೂ ಜನತೆಯ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಬೀರುತ್ತವೆ. ಸೂಫಿ ಸಂತರ ಧರ್ಮ ಪ್ರಚಾರದ ಕುರಿತು ಅವರು ಎಲ್ಲಾ ಧರ್ಮದವರನ್ನು ಸಹೋದರತ್ವದಲ್ಲಿ ಕಾಣಬೇಕೆಂಬ ಬೋಧನೆಯ ತತ್ವದಲ್ಲಿ ಭಾವೈಕ್ಯತೆ ಅಡಗಿತ್ತು. ಆದ್ದರಿಂದ ಬಹುಸಂಖ್ಯಾತರು ಅವರ ಅನುಯಾಯಿಗಳಾಗಿ ಅವರನ್ನು ನಂಬುವ, ಭಕ್ತಿ ಭಾವದಿಂದ ನಡೆದುಕೊಳ್ಳುವ ಪ್ರಕ್ರಿಯೆ ಆರಂಭಗೊಂಡವು.

ಹಿಂದು ಮುಸ್ಲಿಂರ ಭಾವೈಕ್ಯತೆಯ ವಸ್ತುವಿಷಯವನ್ನು ಜನಪದ ಸಾಹಿತ್ಯ ಒಳಗೊಂಡಿದೆ."ಹಿಂದೂ ಕವಿಗಳು ರಚಿಸಿದ ಮುಸ್ಲಿಂ ಸೂಫಿಗಳ ಹಾಡುಗಳು, ಆಗಿ ಹೋದ ಕವಿ-ಸಂತ-ಸತ್ಪುರುಷರನ್ನು ಕುರಿತು ಜನಪದ ಕವಿಗಳು ಯಾವ ಬೇಧಭಾವವಿಲ್ಲದೆ ಅವರ ಮೇಲೆ ಹಾಡುಗಳನ್ನು ಬಹು ಭಯ-ಭಕ್ತಿಯಿಂದ ಕಟ್ಟಿಕೊಂಡು ಬಂದಿದ್ದಾರೆ. ಇವರು ಮುಸ್ಲಿಂ ಕೋಮಿಗೆ ಸೇರದವರು ಎನ್ನುವ ಮನೋಭಾವ ಅಲ್ಲಿ ಮೂಡುವುದೇ ಇಲ್ಲ. ತಮ್ಮ ದೇವತೆಗಳೇ ಎನ್ನುವಷ್ಟು ಸರಳಭಾವ ಹಾಡುಗಳಲ್ಲಿ ಎದ್ದು ಕಾಣುತ್ತದೆ. ಅಷ್ಟೇ ಮುಸ್ಲಿಂ ಕವಿಗಳು ವೀರಶೈವ ತತ್ವಗಳನ್ನಳವಡಿಸಿಕೊಂಡು ಹಿಂದೂ ದೇವರುಗಳನ್ನು ಆರಾಧ್ಯ ದೇವರನ್ನಾಗಿಸಿಕೊಂಡು, ಅವರನ್ನೇ ತಮ್ಮ ಕಾವ್ಯದ ಅಂಕಿತವನ್ನಾಗಿ ಮಾಡಿಕೊಂಡು ಬರೆದ ಹಾಡುಗಳ ಸಂಖ್ಯೆ ಜನಪದ ಸಾಹಿತ್ಯ ಸೃಷ್ಟಿಯಲ್ಲಿ ಅಧಿಕವಾಗಿದೆ."೫

ಹರದೇಶಿ-ನಾಗೇಶಿ ಹಾಡುಗಳು ಗಂಡು ಹೆಣ್ಣಿನ ಬಗೆಗಿನ ಅಭಿವ್ಯಕ್ತಿಗಳಾಗಿದ್ದರೂ ಅಲ್ಲಲ್ಲಿ ಸಾಮಾಜಿಕ ನೀತಿಯನ್ನು, ವೀರಶೈವ ತತ್ವಗಳನ್ನು ಪ್ರತಿಪಾದಿಸುತ್ತವೆ. "ತಪ್ಪುದಾರಿ ತುಳಯುತ್ತಿರುವಾಗಲೆಲ್ಲ ಇವು ಸೃಷ್ಟಿಯಾಗಿ ಜನಪದ ಸಮಾಜವನ್ನು ತಿದ್ದುತ್ತ ಸುಮಾರ್ಗಕ್ಕೆಳೆದಿವೆ. ಕವಿಗಳ ನೈತಿಕ ಗುಣಗಳೇ ಹಾಡಾಗಿ, ಸಂಗೀತಗಾರನ ಬಾಯಿಂದ ಹೊರಗಾಗಿ, ಜನರ ಹೃದಯದಲ್ಲಿ ಹೊಕ್ಕು ಫಲನೀಡಿವೆ. ಇವುಗಳ ಪಾಠಶಾಲೆಯಲ್ಲಿ ಜನಪದರು ನೈತಿಕ ಪಾಠವನ್ನು ಕಲಿತು ಹಿರಿಯರ ಜೀವನಾದರ್ಶಗಳನ್ನು ಪಡೆದುಕೊಂಡಿದ್ದಾರೆ. ವೀರಶೈವ ತತ್ವಗಳನ್ನು ಪ್ರತಿಪಾದಿಸಿದವರಲ್ಲಿ ವೀರಶೈವ ಕವಿಗಳಗಿಂತ ಮುಸಲ್ಮಾನ ಕವಿಗಳ ಸೇವೆ ಅದ್ಭುತವಾಗಿದೆ. ವೀರಶೈವ ಧರ್ಮದಲ್ಲಿ ಮುಸಲ್ಮಾನರು ತಳೆದ ಅಭಿಮಾನ, ಭಕ್ತಿ, ಗೌರವ, ನಿಷ್ಠೆ ಗುಣಗಳೆಲ್ಲ ತುಂಬಿ ಭಾವೈಕ್ಯತೆಯ ಸಂಕೇತವೆನಿಸಿವೆ."೬ ಪರಧರ್ಮ ಸಹಿಷ್ಣುತೆಯ ದ್ಯೋತಕವಾಗಿ ಜನಪದರು ಸಾಹಿತ್ಯವನ್ನು ರಚಿಸಿದರು.

ಗೀಗೀ ಪದಗಳ ಸಂಪ್ರದಾಯಗಳನ್ನು ಬೆಳೆಸಿದವರಲ್ಲಿ ಮುಸಲ್ಮಾನರು ಬಹಳ ಜನ ದೊರೆಯುತ್ತಾರೆ. ಅಲ್ಲದೇ ಹಿಂದೂ ಪುರಾಣ, ದೇವದೇವತೆಗಳ ಬಗೆಗೆ ಆತ್ಮೀಯವಾದ ಗೌರವ ಮತ್ತು ಪರಿಜ್ಞಾನವನ್ನು ಹೊಂದಿದವರಾಗಿದ್ದರು. ಆಧ್ಯಾತ್ಮಿಕ ಮತ್ತು ತಾತ್ವಿಕ ತಳಹದಿಯ ಮೇಲೆ ಸಾಹಿತ್ಯ ಸೃಷ್ಟಿಸಿದ ಅದೇಷ್ಟೋ ಮುಸಲ್ಮಾನ ಕವಿಗಳಿದ್ದಾರೆ. ಸಾವಳಗಿ ಮಹಮ್ಮದ ಸಾಹೇಬ, ಕೊಳ್ಳೂರು ಹಸನಾ, ಜನವಾಡ ನಾನಾ ಸಾಹೇಬ, ಹಲಸಂಗಿ ಖಾಜಾಬಾಯಿ, ಇಂಗಳೇಶ್ವರ ಲಾಲೇಸಾಹೇಬ, ಬೈರಾಮರಡಗಿ ಹೈದರ ಸಾಹೇಬ ಪಠಾಣ ಮುಂತಾದವರು ಪ್ರಮುಖರಾಗಿದ್ದಾರೆ. ಇವರುಗಳ ಹಾಡುಗಳಲ್ಲಿ ಪಂಚಾಚಾರ, ಅಷ್ಟಾವರಣ, ,ಷಟ್‌ಸ್ಥಲ, ಶರೀರತ್ರಯ, ಮಲತ್ರಯ, ಲಿಂಗತ್ರಯ, ಬ್ರಹ್ಮಾಂಡ ಪಿಂಡಾಂಡಗಳ ಉತ್ಪತ್ತಿ, ಯೋಗ ಮುಂತಾದ ಆಧ್ಯಾತ್ಮಿಕ ವಿಷಯಗಳ ಕುರಿತು ಗೀಗೀ ಪದಗಳನ್ನು ರಚಿಸಿದ್ದಾರೆ. ಹೀಗೆ ಜನಪದ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಭಾವೈಕ್ಯತೆಯ ಮೌಲ್ಯ ಪ್ರತಿಪಾದನೆ ಕಾಣಸಿಗುತ್ತದೆ.

ಒಟ್ಟಾರೆಯಾಗಿ ಜನಪದರು ಭಾವೈಕ್ಯದ ನಿಧಿಗಳೇ ಆಗಿದ್ದಾರೆ ಎಂದರೆ ಅತಿಶಯೋಕ್ತಿಯನಿಸದು. ಜನಪದ ಸಂಸ್ಕೃತಿ ಪ್ರಧಾನ ಸಂಸ್ಕೃತಿಯಲ್ಲಿ ಬೆರೆತು ಒಂದಾಗಿ ಸಮಷ್ಟಿ ಭಾವವನ್ನು ಸೃಷ್ಟಿಸುವ ಸಾಹಿತ್ಯವಾಗಿದೆ. ನಾಗರಿಕ ಸಂಸ್ಕೃತಿಗೆ ಮಾದರಿಯ ನೆಲೆಗಳನ್ನು ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಜನಮನಕ್ಕೆ ಮುದ ನೀಡುವ ಇಂತಹ ಭಾವೈಕ್ಯತೆಯ ತಾತ್ವಿಕತೆಯನ್ನು ಜನಪದ ಸಾಹಿತ್ಯ ಒಳಗೊಂಡಿದೆ. ಕೋಮು ಗಲಭೆಗಳುಂಟಾಗುತ್ತಿರುವ ಇಂದಿನ ಸಂದರ್ಭಕ್ಕೆ ಜನಪದ ಕವಿಗಳ ಇಲ್ಲಿನ ಸೃಷ್ಟಿ ಅದೆಷ್ಟು ಚೇತೋಹಾರಿಯಾಗಿವೆ. ಕೋಮು ಸೌಹಾರ್ದತೆಯನ್ನು ಕದಡುತ್ತಿರುವ ಸೈತಾನನ ಚಹರೆ ಎಲ್ಲೆಡೆ ಹರಡುತ್ತಿರುವ ಕಾಲದಲ್ಲಿ ಮತ್ತೊಮ್ಮೆ ನಾವು ಇಂಥ ಭಾವೈಕ್ಯತೆಯನ್ನು ಬಿತ್ತಿ, ಬೆಳೆದ ಮಾನವೀಯತೆಯನ್ನು ಇಂದು ಮತ್ತೇ ಮರು ಅವಲೋಕನಕ್ಕೊಳಪಡಿಸುವ ಅವಶ್ಯಕತೆ ಇದೆ.

## ಕೊನೆಯ ಟಿಪ್ಪಣಿ

೧. ಲೇ: ಡಾ.ಬಸವರಾಜ ಪೊಲೀಸ್ ಪಾಟೀಲ್, ಜಾನಪದ ವ್ಯಾಸಂಗ, ಅಮರ ಪ್ರಕಾಶನ, ಗುಲ್ಬರ್ಗಾ, ವರ್ಷ: ೧೯೯೮ ಪುಟ-೧೧೭

೨. ಸಂ: ಡಾ.ವೀರಣ್ಣ ದಂಡೆ, ಲೇ: ಡಾ.ದಸ್ತಗಿರ ಅಲ್ಲೀಭಾಯಿ, ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವರ್ಷ:೨೦೦೬, ಪುಟ: ೧೮೭

೩. ಸಂ: ಡಾ.ವೀರಣ್ಣ ದಂಡೆ, ಲೇ: ಡಾ.ದಸ್ತಗಿರ ಅಲ್ಲೀಭಾಯಿ, ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವರ್ಷ:೨೦೦೬, ಪುಟ: ೧೯೫

೪. ಸಂ: ಡಾ.ವೀರಣ್ಣ ದಂಡೆ, ಲೇ: ಡಾ.ದಸ್ತಗಿರ ಅಲ್ಲೀಭಾಯಿ, ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ವರ್ಷ: ೨೦೦೬, ಪುಟ: ೨೦೯-೨೧೦

೫. ಲೇ: ಡಾ. ಬಸವರಾಜ ಪೊಲೀಸ್ ಪಾಟೀಲ್, ಜಾನಪದ ವ್ಯಾಸಂಗ, ಅಮರ ಪ್ರಕಾಶನ, ಗುಲ್ಬರ್ಗಾ, ವರ್ಷ: ೧೯೯೮ ಪುಟ-೧೨೦

೬. ಲೇ: ಡಾ. ಬಸವರಾಜ ಪೋಲಿಸ್ ಪಾಟೀಲ್, ಜಾನಪದ ಸಂಕಥನ, ಬಸವ ಪ್ರಕಾಶನ ಗುಲ್ಬರ್ಗಾ, ವರ್ಷ:೨೦೧೧ ಪುಟ-೧೦೩